KACM710038602022

**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.</u>**

<u>ಉಪಸ್ಥಿತರು</u>
ಶ್ರೀಮತಿ ಉರ್ಮಿಳ.ವಿ., ಬಿ.ಎ.ಎಲ್., ಎಲ್‌ಎಲ್‌ಬಿ.,
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

ದಿನಾಂಕ ಃ **6** ನೇ ಮಾರ್ಚ್ **2026**

<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ **2827/2022**</u>

ಫಿರ್ಯಾದಿ ಃ ರಾಜ್ಯದ ಪರವಾಗಿ ಲಿಂಗದಹಳ್ಳಿ ಪೊಲೀಸರು

**(**ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು**)**

-ವಿರುದ್ಧ-

<u>ಆರೋಪಿ/ತರುಃ</u>

1) ಕಿರಣ್ ಬಿನ್ ರವಿಕುಮಾರ, 29 ವರ್ಷ, ವ್ಯವಸಾಯಗಾರರು,
2) ಗುರು ಯಾನೆ ಗುರುಕಿರಣ ಬಿನ್ ಶಿವಣ್ಣ, 21 ವರ್ಷ, ಕೂಲಿಕೆಲಸ,
3) ಪ್ರಮೋದ ಬಿನ್ ಮೂರ್ತಪ್ಪ, 21 ವರ್ಷ, ಕೂಲಿಕೆಲಸ,
4) ಅಭಿ ಬಿನ್ ವೆಂಕಟೇಶ, 22 ವರ್ಷ, ಕೂಲಿಕೆಲಸ,

ಎಲ್ಲರೂ ವಾಸ ಃ ನಂದಿಹೊಸಳ್ಳಿ ಗ್ರಾಮ, ಲಿಂಗದಹಳ್ಳಿ ಹೋಬಳಿ, ತರೀಕೆರೆ ತಾಲ್ಲೂಕು.

(ಆರೋಪಿತರ ಪರವಾಗಿಃ ಶ್ರೀ ಎಸ್.ಪಿ., ನ್ಯಾಯವಾದಿಗಳು.)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 14.09.2021 |
| 2 | ಅಪರಾಧ ವರದಿ ಮಾಡಿದ ದಿನಾಂಕ | 15.09.2021 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | - |
| 4 | ಪಿರ್ಯಾದಿಯ ಹೆಸರು | ತೇಜಸ್.ಹೆಚ್.ಎಸ್. |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 19.02.2026 |

Visit **ecourts.gov.in** for updates or download mobile app "**eCourts Services**" from Android or iOS

| | | |
|---|---|---|
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 19.02.2026 |
| 7 | ಆರೋಪಿಸಲಾದ ಅಪರಾಧಗಳು | ಭಾ.ದ.ಸಂ.ಕಲಂ 323, 324 ಸಹವಾಚಕ ಕಲಂ 34 |
| 8 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ನಿರಪರಾಧಿಗಳು |

*******

ತೀರ್ಪು

ಠಾಣಾಧಿಕಾರಿಗಳು, ಲಿಂಗದಹಳ್ಳಿ ಪೊಲೀಸ್ ಠಾಣೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 323 ಮತ್ತು 324 ಸಹವಾಚಕ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೇ:-

ದಿನಾಂಕ 14.09.2021 ರಂದು ಸಂಜೆ 07.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ನಂದಿಹೊಸಳ್ಳಿ ಗ್ರಾಮದಲ್ಲಿ ಚಾಸಾ-1 ತೇಜಸ್ ಮತ್ತು ಚಾಸಾ-2 ಗಿರೀಶರವರು ಭಗವತಿ ಕಟ್ಟೆಯ ಹತ್ತಿರ ಗಣಪತಿ ವಿಸರ್ಜನೆಗೆಂದು ಹೋಗುತ್ತಿರುವಾಗ ಆರೋಪಿತರು ಎದುರುಗಡೆ ಬಂದಾಗ ಚಾಸಾ-1 ರವರು 1 ನೇ ಆರೋಪಿಯನ್ನು ನಿಲ್ಲಿಸಿ ಸಣ್ಣ ಗಣಪತಿ ಬಿಡುವ ವೇಳೆಯಲ್ಲಿ ಏಕೆ ನನ್ನೊಂದಿಗೆ ಗಲಾಟೆ ಮಾಡಿದೆ ಎಂದು ಕೇಳಿದಾಗ ಆರೋಪಿತರು ಸಮಾನ ಉದ್ದೇಶದಿಂದ 1 ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಹಣೆಗೆ ಹೊಡೆದು ಹಾಗೂ 2 ರಿಂದ 4 ನೇ ಆರೋಪಿತರು ಚಾಸಾ-1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆ. ಆದ್ದರಿಂದ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

Visit **ecourts.gov.in** for updates or download mobile app “**eCourts Services**” from Android or iOS

3. ಪ್ರಸ್ತುತ ಪ್ರಕರಣದಲ್ಲಿ ಪ್ರಕರಣವು ತನಿಖಾ ಹಂತದಲ್ಲಿರುವಾಗ ಆರೋಪಿತರು ವಕೀಲರ ಮೂಲಕ ನ್ಯಾಯಾಲಯದ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ತನಿಖಾಧಿಕಾರಿಯು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು ಹಾಗೂ ಆರೋಪಿತರಿಗೆ ಸಮನ್ಸ್ ಹೊರಡಿಸಲಾಯಿತು. ಆರೋಪಿತರು ನ್ಯಾಯಾಲಯದ ಸಮನ್ಸ್ ಪಡೆದು ನ್ಯಾಯಾಲಯದ ಮುಂದೆ ಹಾಜರಾಗಿದ್ದು, ಆರೋಪಿತರಿಗೆ ಅಭಿಯೋಜನೆಯ ಎಲ್ಲಾ ದಸ್ತಾವೇಜುಗಳನ್ನು ಭಾರತೀಯ ದಂಡ ಪಕ್ರಿಯಾ ಸಂಹಿತೆ ಕಲಂ 207 ರ ಅನುಸಾರ ಒದಗಿಸಲಾಗಿರುತ್ತದೆ. ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 324 ಮತ್ತು 323 ಸಹವಾಚಕ ಕಲಂ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪಣೆಯನ್ನು ರಚಿಸಲಾಯಿತು. ಆರೋಪಿತರು ಆರೋಪಣೆಯನ್ನು ನಿರಾಕರಿಸಿ ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಿರುವ 10 ಸಾಕ್ಷಿದಾರರ ಪೈಕಿ ಚಾಸಾ-1 ಮತ್ತು 2 ರವರು ಕ್ರಮವಾಗಿ ಅಸಾ-1 ಮತ್ತು 2 ರಂತೆ ಸಾಕ್ಷ್ಯ ನುಡಿದಿರುತ್ತಾರೆ. ಅಸಾ-1 ರವರು ಪಿರ್ಯಾದುದಾರರು ಹಾಗೂ ಗಾಯಾಳು ಸಾಕ್ಷಿದಾರರಾಗಿ ಮತ್ತು ಅಸಾ-2 ರವರು ಪ್ರತ್ಯಕ್ಷ ಹಾಗೂ ಘಟನಾ ಸ್ಥಳ ತೋರಿಸಿದ ಬಗ್ಗೆ ಸಾಕ್ಷಿದಾರರಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯ ಆಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ. ಅಭಿಯೋಜನೆಯು 3 ದಾಖಲೆಗಳನ್ನು ಹಾಜರುಪಡಿಸಿ ಅದನ್ನು ನಿಪಿ-1 ರಿಂದ 3 ಎಂದು ಗುರ್ತಿಸಿಕೊಂಡಿರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

5. ಅಭಿಯೋಜನೆಯು ತನ್ನ ಪರವಾಗಿ ವಿಚಾರಣೆ ಮುಗಿಸಿದ ನಂತರ ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಸಾಕ್ಷ್ಯವು ಇಲ್ಲದೇ ಇರುವುದರಿಂದ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿತರ ಹೇಳಿಕೆಗಳನ್ನು ಕೈಬಿಡಲಾಗಿರುತ್ತದೆ.

6. ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ನ್ನು ಪಾಲನೆ ಮಾಡಿರುತ್ತಾರೆ.

7. ಆರೋಪಿತರ ಪರ ಹಾಗೂ ಅಭಿಯೋಜಕರ ಪರ ವಾದ ಪ್ರತಿವಾದಗಳನ್ನು ಆಲಿಸಲಾಯಿತು.

8. ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತದೆ ಃ

**1)** ದಿನಾಂಕ 14.09.2021 ರಂದು ಸಂಜೆ 07.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ನಂದಿಹೊಸಳ್ಳಿ ಗ್ರಾಮದಲ್ಲಿ ಚಾಸಾ-1 ತೇಜಸ್ ಮತ್ತು ಚಾಸಾ-2 ಗಿರೀಶರವರು ಭಗವತಿ ಕಟ್ಟೆಯ ಹತ್ತಿರ ಗಣಪತಿ ವಿಸರ್ಜನೆಗೆಂದು ಹೋಗುತ್ತಿರುವಾಗ ಆರೋಪಿತರು ಎದುರುಗಡೆ ಬಂದಾಗ ಚಾಸಾ-1 ರವರು 1 ನೇ ಆರೋಪಿಯನ್ನು ನಿಲ್ಲಿಸಿ ಸಣ್ಣ ಗಣಪತಿ ಬಿಡುವ ವೇಳೆಯಲ್ಲಿ ಏಕೆ ನನ್ನೊಂದಿಗೆ ಗಲಾಟೆ ಮಾಡಿದೆ ಎಂದು ಕೇಳಿದಾಗ ಆರೋಪಿತರು ಸಮಾನ ಉದ್ದೇಶದಿಂದ 1 ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಹಣೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

**2)** ಅದೇ ದಿನ, ಅದೇ ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ, 2 ರಿಂದ 4 ನೇ ಆರೋಪಿತರು ಚಾಸಾ-1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು

ಮಾಡಿದ್ದು, ಆದ್ದರಿಂದ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸೆಗಿರುತ್ತಾರೆ ಎಂದು ಅಭಿಯೋಜನೆಯವರು ನಿಸ್ಸಂಶಯಾತೀತವಾಗಿ ಸಾಬೀತು ಪಡಿಸಿರುತ್ತಾರೆಯೇ?

3) ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ ಃ

ಅಂಶ-1ಃ ನಕಾರಾತ್ಮಕವಾಗಿ,

ಅಂಶ-2ಃ ನಕಾರಾತ್ಮಕವಾಗಿ,

ಅಂಶ-3ಃ ಅಂತಿಮ ಆದೇಶದಂತೆ**,**

-ಃ ಕಾ ರ ಣ ಗ ಳು ಃ-

10. ಅಂಶ**-1** ಮತ್ತು **2** ಃ ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ಎಲ್ಲಾ ಅಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯು ದಿನಾಂಕ 14.09.2021 ರಂದು ಸಂಜೆ 07.00 ಗಂಟೆ ಸಮಯದಲ್ಲಿ ಲಿಂಗದಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ನಂದಿಹೊಸಳ್ಳಿ ಗ್ರಾಮದಲ್ಲಿ ಚಾಸಾ-1 ತೇಜಸ್ ಮತ್ತು ಚಾಸಾ-2 ಗಿರೀಶರವರು ಭಗವತಿ ಕಟ್ಟೆಯ ಹತ್ತಿರ ಗಣಪತಿ ವಿಸರ್ಜನೆಗೆಂದು ಹೋಗುತ್ತಿರುವಾಗ ಆರೋಪಿತರು ಎದುರುಗಡೆ ಬಂದಾಗ ಚಾಸಾ-1 ರವರು 1 ನೇ ಆರೋಪಿಯನ್ನು ನಿಲ್ಲಿಸಿ ಸಣ್ಣ ಗಣಪತಿ ಬಿಡುವ ವೇಳೆಯಲ್ಲಿ ಏಕೆ ನನ್ನೊಂದಿಗೆ ಗಲಾಟೆ ಮಾಡಿದೆ ಎಂದು ಕೇಳಿದಾಗ ಆರೋಪಿತರು ಸಮಾನ ಉದ್ದೇಶದಿಂದ 1 ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಹಣೆಗೆ ಹೊಡೆದು ಹಾಗೂ 2 ರಿಂದ 4 ನೇ ಆರೋಪಿತರು ಚಾಸಾ-1 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆ ಎಂಬುದನ್ನು ಸಂಶಯಾತೀತವಾಗಿ ಸಾಬೀತು ಪಡಿಸಬೇಕಾಗಿರುತ್ತದೆ.

Visit **ecourts.gov.in** for updates or download mobile app "**eCourts Services**" from Android or iOS

11. ಚಾಸಾ-1/ಅಸಾ-1 ರವರು ಈ ಪ್ರಕರಣದ ಪಿರ್ಯಾದುದಾರರು ಮತ್ತು ಗಾಯಾಳು ಸಾಕ್ಷಿಯಾಗಿದ್ದು, ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ತನಗೆ ಪರಿಚಯಸ್ಥರು, ಆರೋಪಿತರು ತನ್ನ ಮೇಲೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ, ತನ್ನ ಮೇಲೆ ಯಾವುದೇ ಗಲಾಟೆ ಮಾಡಿರುವುದಿಲ್ಲ, ತಾನು ಈ ಪ್ರಕರಣದ ಸಂಬಂಧ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದು ಕೊಂಡಿರುವುದಿಲ್ಲ, ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ ಎಂದು ನುಡಿದು, ಪಿರ್ಯಾದಿನಲ್ಲಿರುವ ತನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಿರುತ್ತಾರೆ. ಅಸಾ-1 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗೆಳೆದಿರುತ್ತಾರೆ. ಅಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಾನು ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಆ ಕಾರಣ ಅಸಾ-1 ರವರ ಸಾಕ್ಷ್ಯ ಅಭಿಯೋಜನೆಗೆ ಸಹಾಯಕವಾಗುವುದಿಲ್ಲ.

12. ಚಾಸಾ-2/ಅಸಾ-2 ರವರು ಈ ಪ್ರಕರಣದ ಪ್ರತ್ಯಕ್ಷ ಹಾಗೂ ಘಟನಾ ಸ್ಥಳ ತೋರಿಸಿದ ಬಗ್ಗೆ ಸಾಕ್ಷಿದಾರರಾಗಿದ್ದು, ಅಸಾ-2 ರವರು ತಮ್ಮ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ತನಗೆ ಪರಿಚಯಸ್ಥರು, ಆರೋಪಿತರು ಚಾಸಾ-1 ರವರ ಮೇಲೆ ಯಾವುದೇ ರೀತಿಯ ಹಲ್ಲೆ ಮಾಡಿರುವುದಿಲ್ಲ, ಅವರ ಮೇಲೆ ಯಾವುದೇ ಗಲಾಟೆ ಮಾಡಿರುವುದಿಲ್ಲ, ಈ ಘಟನೆಯನ್ನು ತಾನು ಕಣ್ಣಾರೆ ಕಂಡಿರುವುದಿಲ್ಲ, ಈ ಪ್ರಕರಣದ ಸಂಬಂಧ ಬೇರೆ ಏನೂ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಅಸಾ-2 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಮೇರೆಗೆ ಪಾಟೀ ಸವಾಲು ಮಾಡಿದ್ದು, ಪಾಟೀ ಸವಾಲಿನಲ್ಲಿ

ಸಹಾಯಕ ಸರ್ಕಾರಿ ಅಭಿಯೋಜಕರ ಎಲ್ಲಾ ಸಲಹೆಗಳನ್ನು ಅಲ್ಲಗೆಳೆದು, ನಿಪಿ-2 ಮತ್ತು 3 ರ ಛಾಯಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿ, ಚಾಸಾ-1 ಮತ್ತು ಆರೋಪಿತರು ಈ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದಾರೆ ಎಂದರೆ ಸರಿ ಎಂದು ನುಡಿದಿರುತ್ತಾರೆ. ಆ ಕಾರಣ ಅಸಾ-2 ರವರ ಸಾಕ್ಷ್ಯ ಅಭಿಯೋಜನೆಗೆ ಸಹಾಯಕವಾಗುವುದಿಲ್ಲ.

13. ಪ್ರಸ್ತುತ ಪ್ರಕರಣದಲ್ಲಿ ಅಸಾ-1 ರವರು ಪಿರ್ಯಾದುದಾರರು ಹಾಗೂ ಗಾಯಾಳು ಸಾಕ್ಷಿದಾರರಾಗಿ ಮತ್ತು ಅಸಾ-2 ರವರು ಪ್ರತ್ಯಕ್ಷ ಹಾಗೂ ಘಟನಾ ಸ್ಥಳ ತೋರಿಸಿದ ಬಗ್ಗೆ ಸಾಕ್ಷಿದಾರರಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯ ಆಗುವುದಿಲ್ಲವೆಂದು ತಿಳಿದು ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ.

14. ಅಭಿಯೋಜಕರು ಈ ಪ್ರಕರಣದ ಅಸಾ-1 ಮತ್ತು 2 ರವರು ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡಿದ್ದು, ಆರೋಪಿತರಿಗೆ ಶಿಕ್ಷೆ ತಪ್ಪಿಸುವ ಸಲುವಾಗಿ ಅಸಾ-1 ಮತ್ತು 2 ರವರು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿರುವುದರಿಂದ ಆರೋಪಿತರನ್ನು ಸೂಕ್ತ ರೀತಿಯಲ್ಲಿ ಶಿಕ್ಷಿಸಬೇಕೆಂದು ತಮ್ಮ ವಾದ ಮಂಡಿಸಿರುತ್ತಾರೆ. ಆರೋಪಿತರ ಪರ ವಕೀಲರು ತಮ್ಮ ವಾದದಲ್ಲಿ ಪ್ರಕರಣದಲ್ಲಿ ಅಸಾ-1 ಮತ್ತು 2 ರವರೇ ತಮ್ಮ ಸಾಕ್ಷ್ಯದಲ್ಲಿ ತಮಗೆ ಆರೋಪಿತರಿಂದ ಯಾವುದೇ ತೊಂದರೆ ಆಗಿರುವುದಿಲ್ಲವೆಂದು ನುಡಿದಿರುವ ಕಾರಣ ಆರೋಪಿತರನ್ನು ದೋಷಮುಕ್ತಗೊಳಿಸಬೇಕೆಂದು ವಾದ ಮಂಡಿಸಿರುತ್ತಾರೆ.

15. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯು ಹಾಜರುಪಡಿಸಿದ ಎಲ್ಲಾ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಅಸಾ-1 ರವರು ಪಿರ್ಯಾದುದಾರರು ಹಾಗೂ ಗಾಯಾಳು ಸಾಕ್ಷಿದಾರರಾಗಿ ಮತ್ತು ಅಸಾ-2 ರವರು ಪ್ರತ್ಯಕ್ಷ ಹಾಗೂ ಘಟನಾ ಸ್ಥಳ ತೋರಿಸಿದ ಬಗ್ಗೆ ಸಾಕ್ಷಿದಾರರಾಗಿ ಪ್ರಕರಣದಲ್ಲಿ ಪ್ರತಿಕೂಲ

Visit **ecourts.gov.in** for updates or download mobile app "**eCourts Services**" from Android or iOS

ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಆರೋಪಿತರೊಡನೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಆದುದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ದೂಷಿಸಲಾದ ಭಾರತೀಯ ದಂಡ ಸಂಹಿತೆ ಕಲಂ 324 ಮತ್ತು 323 ಸಹವಾಚಕ ಕಲಂ 34 ರಡಿಯಲ್ಲಿನ ಒಳಾಂಶಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುವುದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ, ಆರೋಪಿತರು ಬಿಡುಗಡೆಗೆ ಅರ್ಹರೆಂದು ಅಭಿಪ್ರಾಯಪಟ್ಟು ಅಂಶ-1 ಮತ್ತು 2 ಕ್ಕೆ ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

16. ಅಂಶ - **3** ಃ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ ಃ

**-ಃ ಆದೇಶ ಃ-**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 324 ಮತ್ತು 323 ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ ದೋಷಮುಕ್ತಗೊಳಿಸಲಾಗಿದೆ.

ಆರೋಪಿತರ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ರದ್ದುಗೊಳಿಸಲಾಗಿದೆ.

ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರಡಿಯಲ್ಲಿ ಸಲ್ಲಿಸಿದ ವೈಯುಕ್ತಿಕ ಬಾಂಡ್ ಹಾಗೂ ಜಾಮೀನು ಬಾಂಡ್ ಈ ಆದೇಶವಾದ ದಿನದಿಂದ ಆರು ತಿಂಗಳುವರೆಗೆ ಊರ್ಜಿತವಾಗಿರುತ್ತದೆ.

ಈ ಪ್ರಕರಣದಲ್ಲಿ ಪಿ.ಎಫ್ ಸಂಖ್ಯೆ 108/2021 - ಪಿ.ಆರ್. ಸಂಖ್ಯೆ 8/2024 ರಲ್ಲಿ ಅಮಾನತ್ತುಪಡಿಸಿಕೊಂಡಿರುವ ಒಂದು ಹಿಡಿ ಗಾತ್ರದ ಕಾಡು ಜಾತಿಯ ಕಲ್ಲು ಬೆಲೆ ಬಾಳದ ವಸ್ತುವಾದ್ದರಿಂದ

Visit **ecourts.gov.in** for updates or download mobile app "**eCourts Services**" from Android or iOS

KACM710038602022

ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸುವಂತೆ ಈ ಮೂಲಕ ಕಛೇರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ 6 ನೇ ಮಾರ್ಚ್ 2026 ರಂದು ಘೋಷಿಸಲಾಯಿತು)

URMILA V

Digitally signed by URMILA V
Date: 2026.03.06 15:43:33 +0530

ಸಹಿ
**(ಉರ್ಮಿಳ.ವಿ.)**
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

<u>ಅನುಬಂಧ</u>

<u>ಅಭಿಯೋಜನೆಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ</u> ಃ-

ಅಸಾ-1 ಃ ತೇಜಸ್.ಹೆಚ್.ಎಸ್.
ಅಸಾ-2 ಃ ಗಿರೀಶ್

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು</u> ಃ-

ನಿಪಿ-1 ಃ ದೂರು
ನಿಪಿ-2,3 ಃ ಛಾಯಚಿತ್ರಗಳು

<u>ಅಭಿಯೋಜನೆಯ ಪರ ಗುರುತು ಮಾಡಲ್ಪಟ್ಟ ಮುದ್ದೆಮಾಲುಗಳು</u> ಃ-

- ಇಲ್ಲ -

<u>ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ ಃ-</u>

- ಇಲ್ಲ -

<u>ಆರೋಪಿತರ ಪರ ಗುರುತು ಮಾಡಲ್ಪಟ್ಟ ದಾಖಲಾತಿಗಳು</u> ಃ-

- ಇಲ್ಲ -

URMILA V

Digitally signed by URMILA V
Date: 2026.03.06 15:43:40 +0530

ಸಹಿ
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ತರೀಕೆರೆ.

Visit **ecourts.gov.in** for updates or download mobile app "**eCourts Services**" from Android or iOS